GeethaShishuShikshanaSangha (R)
GSSS SIMHA SUBBAMAHALAKSHMI FIRST GRADE COLLEGE
KRS ROAD, MYSURU-570 016
ಯಶಸ್ YASHAS SSFGC Weekly Newsletter

Volume – 2 Issue No. 34 18 Jan 2020

# Teacher Effectiveness Workshop



Prof. Sunney Tharappan

One day workshop on 'Teacher Effectiveness, Development, Mentoring and Counseling' was held at GSSS Simha Subbamahalakshmi First Grade College. Noted Human Resource Trainer Prof. Sunney Tharappan conducted the workshop on 13th January 2020.

He explained how Development, Mentoring and Counseling are different from each other. He detailed the audience about improving the interpersonal skills as a teacher and implement those in teaching. With various examples and practical demo he explained how leadership qualities in a teacher can be improved.



College weekly 'Yashas' release

Administrative Officer, GSSS Group of Institutions, Smt. Anupama B. Pandit inaugurated the workshop by lighting the lamp. Later part of the day, Honorary Secretary, GSSS Group of Institutions Smt. Vanaja B. Pandit graced the occasion and interacted with the participants. There were about 140 teachers from 18 different colleges in the workshop. Dr. Hiremath, Prof. Victor and Prof. Hemalatha assisted Prof. Sunney Tharappan in conducting the workshop.

All the staff of GSSS SSFGC participated in the workshop. Direcotor Dr. Prabhakara K V, Principal Prof. K U Basappa and IQAC Coordinator Prof. Anil were present.



Smt. Vanaja B. Pandit with the Director

Report: Dr Prabhakara K V

# ಪರಿಣಾಮಕಾರಿ ಅಧ್ಯಾಪನ

## ಜಿ.ಎಸ್.ಎಸ್.ಎಸ್ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಕಾರ್ಯಾಗಾರ

"ಪರಿಣಾಮಕಾರಿ ಅಧ್ಯಾಪಕರು, ವಿದ್ಯಾರ್ಥಿ ಮಾರ್ಗದರ್ಶನ ಮತ್ತು ಸಮಾಲೋಚನೆ" ಎಂಬ ವಿಷಯದ ಮೇಲಿನ ಒಂದು ದಿನದ ಕಾರ್ಯಾಗಾರ ಜಿ.ಎಸ್ ಎಸ್ ಎಸ್ ಸಿಂಹ ಸುಬ್ಬಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಜನವರಿ ೧೩ ರಂದು ನಡೆಯಿತು. ಹೆಸರಾಂತ ಮಾನವ ಸಂಪನ್ಮೂಲ ತರಬೇತುದಾರ ಪ್ರೊ.ಸನ್ನಿ ತಾರಪ್ಪನ್ ರವರು ಸಂಪನ್ಮೂಲವ್ಯಕ್ತಿಯಾಗಿ ಕಾರ್ಯಾಗಾರವನ್ನು ನಡೆಸಿಕೊಟ್ಟರು.



ಅಭಿವೃದ್ಧಿ, ಮಾರ್ಗದರ್ಶನ ಮತ್ತು ಸಮಾಲೋಚನೆಯ ಅರ್ಥವ್ಯಾಪ್ತಿ ಅವುಗಳ ನಡುವೆ ಇರುವ ವ್ಯತ್ಯಾಸ ಮತ್ತು ಅದಕ್ಕೆ ಪೂರಕವಾದ ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸುವುದು, ಅವುಗಳನ್ನು ಸಂಸ್ಥೆಯ ನೀತಿಯಾಗಿ ಅಳವಡಿಸಿಕೊಳ್ಳುವ ಬಗೆ, ಅಧ್ಯಾಪಕರಲ್ಲಿ ಶೈಕ್ಷಣಿಕ ನಾಯಕತ್ವವನ್ನು ರೂಪಿಸುವುದು ಮುಂತಾದ ವಿಚಾರಗಳ ಬಗ್ಗೆ ಉದಾಹರಣೆಗಳು ಮತ್ತು ಪ್ರಾಯೋಗಿಕ ಪಾಠಗಳ ಮೂಲಕ ಕಾರ್ಯಾಗಾರವನ್ನು ಸಂಯೋಜಿಸಲಾಗಿತ್ತು.

ಆರಂಭದ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಂಸ್ಥೆಯ ಆಡಳಿತಾಧಿಕಾರಿಗಳಾದ ಶ್ರೀಮತಿ ಅನುಪಮ ಬಿ ಪಂಡಿತ್ ರವರು ಭಾಗವಹಿಸಿದ್ದರು. ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀಮತಿ ವನಜ ಬಿ ಪಂಡಿತ್ ರವರು ಸುಮಾರು ೧೮ ಕಾಲೇಜುಗಳಿಂದ ಅಗಮಿಸಿದ  ೧೪೦ ಅಧ್ಯಾಪಕರು ಮತ್ತು ಸಂಪನ್ಮೂಲ ವ್ಯಕ್ತಿಗಳೊಂದಿಗೆ ಸಮಾಲೋಚನೆ ನಡೆಸಿದರು. ಪ್ರೊ, ಸನ್ನಿ ತಾರಪ್ಪನ್ ಅವರೊಂದಿಗೆ ಡಾ.ಹಿರೇಮಠ್, ಪ್ರೊ. ವಿಕ್ಟರ್ ಮತ್ತು ಪ್ರೊ. ಹೇಮಲತ ಅವರು ಸಹಕರಿಸಿದರು.

ಕಾಲೇಜಿನ ನಿರ್ದೇಶಕರಾದ ಡಾ.ಕೆ.ವಿ ಪ್ರಭಾಕರ, ಪ್ರಾಂಶುಪಾಲರಾದ ಪ್ರೊ. ಕೆ ಯು ಬಸಪ್ಪ, ಆಂತರಿಕ ಗುಣಮಟ್ಟ ನಿರ್ವಹಣಾ ಘಟಕದ ಸಂಯೋಜಕರಾದ ಪ್ರೊ. ಅನಿಲ್ ಮತ್ತಿತರರು ಉಪಸ್ಥಿತರಿದ್ದರು.

**ವರದಿ – ಡಾ. ಪ್ರಭಾಕರ ಕೆ ವಿ**

## Let's do it Mysore



**Kum. Shreya Babu addressing the students**

Let's do it Mysore is a movement initiated to motivate and encourage Mysoreans towards beautifying the heritage city by keeping it clean. It's a movement inspired by Let's do it World, launched in the year 2014, with the motive of crowning Mysore as the cleanest city in India. The NGO is engaged in various campaigns promoting cleanliness in the city, taking up regular clean up drives in prime areas & promoting the youth of the city to involve themselves in such drives. Two volunenteers, Shreya Babu and Pragathi explained the importance of keeping the city clean and invited the college for effective  participation in a formal meeting with staff and students on 18th January 2020.

# ವಿದ್ಯಾರ್ಥಿಗಳಿಗೆ ಅಧ್ಯಯನದ ಜೊತೆಗೆ ಪಠ್ಯ ಪೂರಕವಾದ ಜ್ಞಾನ ಅವಶ್ಯ.

–ಪ್ರೊ. ಸಿ.ಎನ್.ಶ್ರೀನಾಥ್



ಮೈಸೂರು ನಗರದ ಐತಿಹಾಸಿಕ ಪರಂಪರೆಯ ತಾಣಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವ ಉದ್ದೇಶದಿಂದ ಜಿ.ಎಸ್ ಎಸ್ ಎಸ್. ಸಿಂಹ ಸುಬ್ಬಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಮತ್ತು ಇಂಗ್ಲಿಷ್ ಭಾಷಾ ವಿಭಾಗಗಳ ವತಿಯಿಂದ ದಿನಾಂಕ ೧೭.೦೧.೨೦೨೦ ರಂದು ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆಗೈದ ಗಣ್ಯ ವ್ಯಕ್ತಿಗಳ ಮತ್ತು ಪಾರಂಪರಿಕ ತಾಣಗಳ ಸಂದರ್ಶನವನ್ನು 'ಯುವಜನೋತ್ಸವದ' ಅಂಗವಾಗಿ ಆಯೋಜಿಸಲಾಗಿತ್ತು.

ಅಲ್ಲಿ ಧ್ವನ್ಯಾಲೋಕದ ನಿರ್ದೇಶಕ ಹಾಗು ಸಿ. ಡಿ. ಎನ್. ಅವರ ಪುತ್ರ ಶ್ರೀಯುತ ಶ್ರೀನಾಥ್ ಅವರು ಗ್ರಂಥಾಲಯದಲ್ಲಿ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಭಾಷೆಯ ಮಹತ್ವ, ಅಂಗ್ಲ ಕವಿಗಳಲ್ಲಿದ್ದ ನಿಸ್ಪೃಹ ಸಾಹಿತ್ಯ ಸೇವಾ ಮನೋಭಾವವನ್ನು ವಿವರಣಾತ್ಮಕವಾಗಿ ಹೇಳಿದರು. ರೊಮ್ಯಾಂಟಿಕ್ ಪಂಥದ ಷೇಕ್ಸ್‌ಪಿಯರ್, ಜಾನ್ ಕೀಟ್ಸ್, ಜಾನ್ ಡ್ರೈಡನ್, ಶೆಲ್ಲಿ ಮೊದಲಾದ ಕವಿಗಳ ಬಗೆಗೆ ಸ್ಥೂಲವಾದ ಮಾಹಿತಿ ನೀಡಿದರು. ಅವರೊಂದಿಗೆ ಸಂವಾದದಲ್ಲಿ ತೊಡಗಿದ ವಿದ್ಯಾರ್ಥಿಗಳಿಗೆ ಧ್ವನ್ಯಾಲೋಕದ ಗುರಿ ಮತ್ತು ಉದ್ದೇಶಗಳನ್ನು ವಿವರಿಸುವುದರ ಜೊತೆಗೆ ತಾವು ಬೆಳೆದು ಬಂದ ದಾರಿಯನ್ನು ಮೆಲುಕು ಹಾಕುತ್ತಾ, ವರ್ತಮಾನದ ದಿನಗಳಲ್ಲಿ ವಿದ್ಯಾರ್ಥಿಗಳು ಅಧ್ಯಯನದ ಜೊತೆಗೆ ಪಠ್ಯ ಪೂರಕವಾದ ಜ್ಞಾನವನ್ನು ಪಡೆಯಬೇಕೆಂದು ಅವರು ಕಿವಿ ಮಾತು ಹೇಳಿದರು.

ಇದಕ್ಕೂ ಮೊದಲು ಕನ್ನಡ ನಾಡಿನ ಕವಿಶ್ರೇಷ್ಠರೆನಿಸಿದ ಕುವೆಂಪು ಅವರ ಉದಯರವಿಗೆ ಭೇಟಿ ನೀಡಿದೆವು. ಕವಿ ವಾಸಿಸಿದ ಮನೆ, ಪರಿಸರವನ್ನು ಕಣ್ತುಂಬಿಕೊಂಡ ವಿದ್ಯಾರ್ಥಿಗಳು ಪುಳಕಿತರಾದರು. ಅಧ್ಯಾಪಕರೊಂದಿಗೆ ಉದಯರವಿಯ ಪರಿಸರವನ್ನು ನೋಡಿ ಕ್ಯಾಮರಾ ಕಣ್ಣಿನಲ್ಲಿ ಸೆರೆಹಿಡಿದುಕೊಂಡರು.

ಮಾನಸ ಗಂಗೋತ್ರಿಯ ಮುಖ್ಯದ್ವಾರದಲ್ಲಿರುವ ಕುವೆಂಪು ಪುತ್ಥಳಿಯ ಮುಂದೆ ನಿರ್ದೇಶಕರು, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳೊಂದಿಗೆ ಭಾವಚಿತ್ರವೊಂದನ್ನು ತೆಗೆದುಕೊಂಡು ಮುಂದೆ ಗಾಂಧಿ ಭವನದ ಕಡೆಗೆ ಸಾಗಿದೆವು. ಗಾಂಧಿ ಭವನದಲ್ಲಿ ಗಾಂಧಿ ಪ್ರತಿಮೆಯನ್ನು ವೀಕ್ಷಿಸಿ ಸಾಬರಮತಿ ಆಶ್ರಮದ ಮರು ಸೃಷ್ಟಿಯನ್ನು ಸುತ್ತು ಹಾಕುತ್ತಾ ರಾಷ್ಟ್ರಪಿತನ ಬಗೆಗಿನ ಹಲವಾರು ಮಾಹಿತಿಗಳನ್ನು ಪಡೆದು ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕರಾದ ಪ್ರೊ.ಶೇಖರ್, ಡಾ.ನಾಗರಾಜು ಮತ್ತು ಇತಿಹಾಸ ಮತ್ತು ಪುರಾತತ್ವ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಡಾ.ಎಸ್. ರಂಗರಾಜು ಎಲ್ಲರೊಂದಿಗೆ ಸೇರಿ ಭಾವಚಿತ್ರ ಮಾಡಿ ಜಯಲಕ್ಷ್ಮಿ ವಿಲಾಸ ಅರಮನೆಯತ್ತ ದಾಪುಗಾಲು ಹಾಕಿದೆವು.

ಮಾನಸ ಗಂಗೋತ್ರಿಯ ಪ್ರಮುಖ ಆಕರ್ಷಣ ಕೇಂದ್ರವಾದ ಜಯಲಕ್ಷ್ಮಿವಿಲಾಸ ಅರಮನೆಯ ಬಗ್ಗೆ ಪುರಾತತ್ವ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಡಾ.ಎಸ್. ರಂಗರಾಜು ಅವರಿಂದ ಮಾಹಿತಿಯನ್ನು ಪಡೆದು, ವಸ್ತು ಸಂಗ್ರಹಾಲಯವನ್ನು ವೀಕ್ಷಣೆ ಮಾಡಿದೆವು. ಈ ಕಾರ್ಯಕ್ರಮ ವಿದ್ಯಾರ್ಥಿಗಳಿಗೆ ಭಾಷೆ ಮತ್ತು ಸಾಂಸ್ಕೃತಿಕ ವ್ಯಾವಹಾರಿಕ ಜ್ಞಾನ, ಅದರ ಉನ್ನತಿಗಾಗಿ, ಖಾಸಗಿ ಮಟ್ಟದ ಮತ್ತು ಸಾಂಸ್ಥಿಕ ಮಟ್ಟದ ಪ್ರಯತ್ನಗಳು, ಆಗಿ ಹೋದ ಮಹನೀಯರು ಅವರ ನಿಸ್ವಾರ್ಥ ಸೇವೆ ಮುಂತಾದ ವಿಚಾರಗಳನ್ನು ಅರ್ಥಪೂರ್ಣವಾಗಿ ಪರಿಚಯಿಸಿತು. ಕಾಲೇಜಿನ ನಿರ್ದೇಶಕರಾದ ಡಾ. ಕೆ.ವಿ.ಪ್ರಭಾಕರ ಅವರ ಸೂಕ್ತ ಮಾರ್ಗದರ್ಶನದಲ್ಲಿ ಹಮ್ಮಿಕೊಂಡ ಈ ಸಂದರ್ಶನ, ಕನ್ನಡ ವಿಭಾಗದ ಅಧ್ಯಾಪಕರಾದ ಮಹದೇವ ಕೆ.ಎಂ, ಇಂಗ್ಲಿಷ್ ವಿಭಾಗದ ಅಧ್ಯಾಪಕರಾದ ಅನಿಲ್ ಮತ್ತು ಗಣಕ ವಿಜ್ಞಾನ ವಿಭಾಗದ ಅಧ್ಯಾಪಕರಾದ ಶ್ರೀಮತಿ ಶ್ರುತಿ ಅವರುಗಳು ಪಾಲ್ಗೊಂಡಿದ್ದರು.

ವರದಿ – ಮಹದೇವ ಕೆ.ಎಂ

# Colourful Ethnic Day

On January 18th 2020, students of first year B.Com hosted Ethnic Day which was focused on celebrating different cultures, regions and languages to showcase the tradition of India. It was a great experience to bring about a simple expression of Unity that holds together the multitude of outlooks, lifestyles and traditions to reflect the ethnicity of our country. The students made the day colourful by wearing traditional attire. Various events and programs were organized, such as word dumb charades, musical chair and Treasure Hunt as part of the day. The response from students of every class was overwhelming.

Prof. Anil, Prof. Poornima and the Director Dr. Prabhakara K V gave the Ethnic Day message. The principal and other staff members were present.



The program was conducted by Kum. Lavanya and was assisted by Arya, Anjali, Sneha, Nandini and Sujana



The day brought a refreshing change from regular time managed schedules to a lively informal celebrative moments.

Second year B.Com students won tie match with the lecturers group in dumb charades. BCA students broke all the hints and found their treasure in the Treasure event and placed themselves as winners. The event was started with a welcome speech by Lavanya. The event was concluded by a vote of thanks by Sneha followed by distributing chocolates

**Report – Sujana S, I B.Com**

## ಮಕರ ಸಂಕ್ರಾಂತಿ ಆಚರಣೆ



ಮಕರ ಸಂಕ್ರಮಣದ ವಿಶೇಷತೆ ಮತ್ತುಮಹತ್ವ ಕುರಿತು ೧೪-೦೧-೨೦೨೦ ರಂದು ಉಪನ್ಯಾಸ ಏರ್ಪಡಿಸಲಾಗಿತ್ತು. ಕನ್ನಡ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಮಹಾದೇವ ಅವರು ಉಪನ್ಯಾಸ ನೀಡಿದರು. ಹಬ್ಬದ ದೃಷ್ಟಿಯಿಂದ, ಪುರಾಣದ ದೃಷ್ಟಿಯಿಂದ ಹಾಗೂ ವೈಜ್ಞಾನಿಕವಾಗಿ ಸಂಕ್ರಾಂತಿ ಹೇಗೆ ಮತ್ತು ಏಕೆ ಮುಖ್ಯ ಅನ್ನುವುದನ್ನು ವಿವರಿಸಿದರು. ಕಾರ್ಯಕ್ರಮದ ಅಂತ್ಯದಲ್ಲಿ ಎಲ್ಲರಿಗೂ ಎಳ್ಳುಬೆಲ್ಲ ಹಂಚಿ, ಶುಭಕೋರಲಾಯಿತು.

# PHOTO GALLERY

Teacher Effectiveness workshop - 13 Jan 2020





Sankranti celebration - 14 Jan 2020





**Heritage Visit - 17 Jan 2020**

Manasa Gangotri (UoM)



Kavi Mane(KuVemPu Residence)



Gandhi Bhavan



Museum



## News from the other campus


On 19th January 2020, four from our Engineering College were felicitated on successful completion of CLHRD Program at Mangalore.






## Sankranti wishes from the Honorable Secretary




GSSS SIMHA SUBBAMAHALAKSHMI FIRST GRADE COLLEGE, K.R.S ROAD, METAGALLI, MYSURU-570016

The Managing Committee members of GSSS (R) wish all the staff and students of our institution

**A Happy Sankranti Festival**

Vanaja B. Pandit
(Hon. Secretary)

> **The duty of a lawyer is always to place before judges, and to help them to arrive at, the truth, never to prove the guilty as innocent.**
>
> **Young India 11-06-25**

**Chief Editor**
Prof K U Basappa, Principal

**Executive Editor**
Mr Subyamany K R, HOD, Dept of BBA
Smt ShruthiD, HOD, Dept of BCA
Mr Sampath Kumar, Librarian

**Photo courtesy**
Dr. Prabhakara K V

**Photo Corner**

